

# ಶಿರಾಡಿಯಲ್ಲಿ ವಿಜಿ!

ಗಡ್ಡ ವಿಜಿ ಎಂದ ಕೂಡಲೇ ನೆನಪಿಗೆ ಬರುವುದು 'ದ್ಯಾವ್ರೇ' ಸಿನಿಮಾ. ಕಾರಾಗೃಹ ಅಧಿಕಾರಿಯೊಬ್ಬನ ಮೂಲಕ ಜೈಲುಹಕ್ಕಿಗಳ ಕಥೆ–ವ್ಯಥೆಯನ್ನು ಅದ್ಭುತವಾಗಿ ಹಿಡಿದಿಟ್ಟ ಸಿನಿಮಾ ಅದು. ಆದರೆ, ಅದರ ಬೆನ್ನಿಗೆ ತೆರೆ ಕಂಡ 'ಪ್ಲಸ್' ಚಿತ್ರದಲ್ಲಿ ವಿಜಿ ಪ್ರೇಕ್ಷಕರನ್ನು ನಿರಾಶೆಗೊಳಿಸಿದ್ದರು. ಅದಾದನಂತರ ಸ್ವಲ್ಪಕಾಲ ಕಿರುತೆರೆ ಧಾರಾವಾಹಿಯಲ್ಲಿ ತೊಡಗಿಕೊಂಡಿದ್ದ ಅವರು, ಈಗ ಮತ್ತೆ ಸಿನಿಮಾ ನಿರ್ದೇಶನದಲ್ಲಿ ತೊಡಗಿಕೊಂಡಿದ್ದಾರೆ. ಅವರ ನಿರ್ದೇಶನದ ಹೊಸ ಚಿತ್ರದ ಹೆಸರು 'ಶಿರಾಡಿ ಘಾಟ್'.

ವಿಜಿ ಪಾಲಿಗೆ ಇದು ನಿರ್ದೇಶನದ ಮೂರನೇ ಸಿನಿಮಾ. 'ಶಿರಾಡಿ ಘಾಟ್' ಎನ್ನುವ ಸ್ಥಳದಲ್ಲಿ ನಡೆಯುವ ಕಥೆಯೊಂದನ್ನು ವಿಜಿ ಚಿತ್ರದಲ್ಲಿ ನಿರೂಪಿಸುತ್ತಿದ್ದಾರೆ. ಹೋಟೆಲೊಂದರಲ್ಲಿ ಕ್ಲೀನರ್ ಆಗಿ ಕಾರ್ಯನಿರ್ವಹಿಸುವ ತರುಣನೊಬ್ಬನ ಹಿನ್ನೆಲೆಯನ್ನು ಕೆದಕುವ ಉದ್ದೇಶದಿಂದ ಹುಡುಗಿಯೊಬ್ಬಳು ಶಿರಾಡಿಗೆ ಬರುತ್ತಾಳೆ. ತಾನು ಹುಡುಕಿಕೊಂಡು ಬಂದ ಹುಡುಗನಿಗೆ ಇರಬಹುದಾದ ಭೂಗತಲೋಕದ ನಂಟನ್ನು ಹುಡುಕುತ್ತಾಳೆ. ಈ ಅನ್ವೇಷಣೆಯಲ್ಲಿ ತೆರೆದುಕೊಳ್ಳುವ ಕೌತುಕ ವಿವರಗಳೇ ಚಿತ್ರದ ಜೀವಾಳ. ನಾಯಕ–ನಾಯಕಿ ಇದ್ದರೂ ಇದು ಪ್ರೇಮಕಥೆಯ ಚಿತ್ರ ಅಲ್ಲವಂತೆ. ಪ್ರಕೃತಿಯ ಹಿನ್ನೆಲೆಯಲ್ಲಿ ಮನುಷ್ಯ ಸ್ವಭಾವಗಳನ್ನು ಚಿತ್ರಿಸುವುದು ವಿಜಿ ಅವರ ಉದ್ದೇಶ. ಹೋಟೆಲ್ ಹುಡುಗರ ಬದುಕಿನ ರೀತಿರಿವಾಜುಗಳನ್ನು ಕೂಡ ಸಿನಿಮಾ ಅನಾವರಣಗೊಳಿಸಲಿದೆಯಂತೆ.

ಸೂರ್ಯ ಚಿತ್ರದ ನಾಯಕ. ವೃತ್ತಿಯಿಂದ ವಕೀಲರಾಗಿರುವ ಅವರು, ಸಿನಿಮಾ ಕಾರಣದಿಂದಾಗಿ ತಮ್ಮ ವಕೀಲಿಕೆಗೆ ರಜೆ ಹಾಕಿದ್ದಾರೆ. 'ಬಿಗ್‌ಬಾಸ್' ರಿಯಾಲಿಟಿ ಷೋ ಖ್ಯಾತಿಯ ಜಯಶ್ರೀ ಚಿತ್ರದ ನಾಯಕಿ. ಇವರ ಜೊತೆಗೆ ಮುತ್ತುರಾಜ್, ಅರಸು, ವಿಜಯ್ ತಾರಾಗಣದಲ್ಲಿರುವ ಪ್ರಮುಖರು. ರೇಣುಕುಮಾರ್ ಛಾಯಾಗ್ರಹಣ ಹಾಗೂ ವೀರಸಮರ್ಥ ಸಂಗೀತ ಚಿತ್ರಕ್ಕಿದೆ.



# ಈ ಕಾಲದ ಹರಿಶ್ಚಂದ್ರ!

ಶರಣ್ ಅಭಿನಯದ 'ರಾಜ್ ವಿಷ್ಣು' ಸಿನಿಮಾ ಮಿಶ್ರಫಲದ ಫಲಿತಾಂಶದೊಂದಿಗೆ ಇನ್ನೂ ಚಿತ್ರಮಂದಿರಗಳಲ್ಲಿ ಇರುವಾಗಲೇ, ಅವರ ನಟನೆಯ ಮತ್ತೊಂದು ಸಿನಿಮಾ ತೆರೆ ಕಾಣುವ ಸಿದ್ಧತೆ ನಡೆಸುತ್ತಿದೆ. 'ಸತ್ಯ ಹರಿಶ್ಚಂದ್ರ' ಸದ್ಯ ಸುದ್ದಿಯಲ್ಲಿರುವ ಸಿನಿಮಾ.

'ಸತ್ಯ ಹರಿಶ್ಚಂದ್ರ' ಸಿನಿಮಾದ ಜೊತೆಗೆ ರಾಜ್‌ಕುಮಾರ್ ಹಾಗೂ ಹುಣಸೂರು ಕೃಷ್ಣಮೂರ್ತಿ ನೆನಪಾಗುತ್ತಾರೆ. ಹುಣಸೂರರ ಅದ್ಭುತ ಸಾಹಿತ್ಯ–ನಿರ್ದೇಶನ ಹಾಗೂ ರಾಜ್ರ ಅವಿಸ್ಮರಣೀಯ ನಟನೆಯ ಹರಿಶ್ಚಂದ್ರ ಕನ್ನಡ ಚಿತ್ರರಸಿಕರ ಮಧುರ ಸ್ಮೃತಿಗಳಲ್ಲೊಂದು. ಈಗ ಅದೇ ಹೆಸರಿನಲ್ಲಿ ಶರಣ್‌ರ ಸಿನಿಮಾ ರೂಪುಗೊಂಡಿದೆ. ಪೌರಾಣಿಕ ಕಥನದ ಹರಿಶ್ಚಂದ್ರನಿಗೂ ಇಂದಿನ ಸಿನಿಮಾಕ್ಕೂ ಯಾವ ಸಂಬಂಧವೂ ಇಲ್ಲ. ಆದರೆ ಹುಣಸೂರರ 'ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ' ಗೀತೆಯನ್ನು ಹೊಸ ಸಿನಿಮಾದಲ್ಲೂ ಬಳಸಿಕೊಳ್ಳಲಾಗಿದೆ. ಈ ಹಾಡಿನ ಚಿತ್ರೀಕರಣವನ್ನು ಮೇಲ್ಕೋಟೆಯಲ್ಲಿ ವಿಭಿನ್ನವಾಗಿ ನಡೆಸಲಾಗಿದೆಯಂತೆ.

ನಿರ್ದೇಶಕ ದಯಾಳ್ ಗರಡಿಯಲ್ಲಿ ರೂಪುಗೊಂಡಿರುವ ಹರಿಶ್ಚಂದ್ರನ ಕಥೆ ಶರಣ್‌ರ ವರ್ಚಸ್ಸಿಗೆ ತಕ್ಕಂತಿದೆಯಂತೆ. 'ಹಗ್ಗದ ಕೊನೆ', 'ಆ್ಯಕ್ಟರ್'ನಂಥ ಪ್ರಯೋಗಶೀಲ ಸಿನಿಮಾಗಳ ನಂತರ ದಯಾಳ್ ಈಗ ಪೂರ್ಣ ಪ್ರಮಾಣದ ಕಮರ್ಷಿಯಲ್ ಸಿನಿಮಾ ನಿರ್ದೇಶಿಸಿದ್ದಾರೆ. ಕಥೆಗಾರ ಮಂಜಣ್ಣ ಎಂದು ಗಾಂಧಿನಗರದಲ್ಲಿ ಪರಿಚಿತರಿಂದ ಕರೆಸಿಕೊಳ್ಳುವ ಕೆ. ಮಂಜು ಈ ಸಿನಿಮಾದ ನಿರ್ಮಾಪಕರು. ಇತ್ತೀಚೆಗಷ್ಟೇ ದಯಾಳ್ ವಿರಚಿತ 'ಹರಿಶ್ಚಂದ್ರ' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆಗೊಂಡಿದೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆಯ ಈ ಚಿತ್ರದ ಗೀತೆಗಳಿಗೆ ಕೇಳುಗರಿಗೆ ಕಚಗುಳಿ ಇಡುವ ಗುಣವಿದ್ದಂತಿದೆ. ಸಂಚಿತಾ ಪಡುಕೋಣೆ ಹಾಗೂ ಭಾವನಾರಾವ್ ಚಿತ್ರದ ನಾಯಕಿಯರು. ಚಿಕ್ಕಣ್ಣ ತಾರಾಗಣದಲ್ಲಿರುವ ಮತ್ತೊಬ್ಬ ಪ್ರಮುಖ ಕಲಾವಿದ. ಅ. 20ರಂದು ಸಿನಿಮಾ ತೆರೆ ಕಾಣಲಿದೆ.

■ ರಘು